ಕರ್ನಾಟಕ ವಿಧಾನ ಸಭೆ

ಸೋಮವಾರ ೨೭ ನೇ ಮಾರ್ಚ್ ೧೯೮೯

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ

೯-೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಗೋಕಾಕ್ ತಾಲ್ಲೂಕಿನಲ್ಲಿರುವ ಸವುಳ ಭೂಮಿ

೧೬೫(೬೭೪) ಶ್ರೀ ಆರ್. ಎಂ. ಪಾಟೀಲ್ (ಅರಭಾವಿ).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿ ಸವುಳು-ಜವುಳು ಇರುವ ಭೂಮಿಯ ವಿಸ್ತೀರ್ಣವೆಷ್ಟು (ಜಿಲ್ಲಾವಾರು ವಿಸ್ತೀರ್ಣದ ವಿವರ ಒದಗಿಸುವುದು) ?

ಆ) ಸದರಿ ಜವುಳು ಸವುಳು ಭೂಮಿಯನ್ನು ಅಭಿವೃದ್ಧಿಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮ ಗಳೇನು ?

ಇ) ಗೋಕಾಕ್ ತಾಲ್ಲೂಕಿನಲ್ಲಿ ಸವುಳು, ಜವುಳವಿರುವ ಜಮೀನಿನ ವಿಸ್ತೀರ್ಣವೆಷ್ಟು, ಹಾಗಿದ್ದಲ್ಲಿ ಸದರಿ ಜಮೀನಿನ ಅಭಿವೃದ್ಧಿ ಕಾರ್ಯವನ್ನೇನಾದರೂ ಕೈಕೊಂಡಿದ್ದಾರೆಯೇ ?

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಸಚಿವರು).—

ಅ) ರಾಜ್ಯದಲ್ಲಿ ೫೪,೦೭೯ ಹೆಕ್ಟೇರ್ ಸವುಳು ಭೂಮಿ ಮತ್ತು ೫೯,೬೯೫ ಹೆಕ್ಟೇರ್ ಜವುಳು ಭೂಮಿ ಇರುತ್ತದೆ. ಜಿಲ್ಲಾವಾರು ಮಾಹಿತಿ ಈ ಕೆಳಕಂಡಂತೆ ಇದೆ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಸವುಳು (ಹೆಕ್ಟೇರುಗಳಲ್ಲಿ)	ಜವುಳು
೧.	ದಕ್ಷಿಣ ಕನ್ನಡ	—	೪,೬೩೪
೨.	ಬಿಜಾಪುರ	೭,೫೩೩	—
೩.	ಚಿತ್ರದುರ್ಗ	೬,೭೨೭	೪,೦೫೧
೪.	ಬಳ್ಳಾರಿ	೭,೪೪೯	೪,೮೫೪
೫.	ಧಾರವಾಡ	೬,೫೫೨	೨,೪೬೦
೬.	ರಾಯಚೂರು	೧೦,೦೫೫	೭,೯೩೪
೭.	ಗುಲ್ಬರ್ಗಾ	೩೯೪	೧,೩೦೬
೮.	ಬೀದರ್	—	೯೦
೯.	ತುಮಕೂರು	೧,೪೦೬	೭೫೧

೧	೨	೩	೪
೧೦.	ಬೆಂಗಳೂರು	೨೧೩	೫೨೧
೧೧.	ಶಿವಮೊಗ್ಗ	೧,೧೫೬	೨,೯೩೧
೧೨.	ಚಿಕ್ಕಮಗಳೂರು	೧ ೦೦೬	೧,೯೮೨
೧೩.	ಹಾಸನ	೧,೭೦೪	೪೪೫
೧೪.	ಮೈಸೂರು	೫೫೬	೨ ೨೦೪
೧೫.	ಕೋಲಾರ	೨,೧೩೪	೫೬೮
೧೬.	ಉತ್ತರ ಕನ್ನಡ	೨,೧೯೭	೮೭೮
೧೭.	ಬೆಳಗಾಂ	೨,೨೫೩	೪,೪೭೭
೧೮.	ಮಂಡ್ಯ	೨,೯೪೪	೫
೧೯.	ಕೊಡಗು	—	—
	ಒಟ್ಟು	೫೪,೦೭೯	೩೯,೬೯೫

ಆ) ೪೯.೭೧ ಲಕ್ಷ ರೂ. ಗಳ ವೆಚ್ಚದಲ್ಲಿ ೧೨೬೮ ಹೆಕ್ಟೇರು ಸವುಳು–ಜವುಳು ಭೂಮಿಯನ್ನು ೧೯೮೩–೮೪ರ ವರೆಗೆ ಅಭಿವೃದ್ಧಿಪಡಿಸಲಾಗಿದೆ. ೀಚ್ಚುಕಟ್ಟು ಪ್ರಾಧಿಕಾರ ವ್ಯಾಪ್ತಿಗೆ ಬರುವ ಪ್ರದೇಶಗಳಲ್ಲಿ ಪ್ರಾಧಿಕಾರವು ಸವುಳು–ಜವುಳು ಭೂಮಿಯ ಅಭಿವೃದ್ಧಿ ಕಾರ್ಯತೆಗೆದುಕೊಳ್ಳುತ್ತಿದೆ. ೧೫.೦೦೦ ಹೆಕ್ಟೇರು ಸವುಳು–ಜವುಳು ಭೂಮಿಯನ್ನು ಅಭಿವೃದ್ಧಿ ಮಾಡಲು ೮೧೪.೫೦ ಲಕ್ಷ ರೂ. ಗಳ ನೆರವನ್ನು ಒದಗಿಸಲು ಕೇಂದ್ರ ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಕಳುಹಿಸಲಾಗಿದೆ.

ಇ) ಗೋಕಾಕ್ ತಾಲ್ಲೂಕಿನಲ್ಲಿ ೧೫೫೯ ಹೆಕ್ಟೇರ್‌ನಷ್ಟು ಸವುಳು–ಜವುಳು ಭೂಮಿ ಇದೆ. ಈ ಜಮೀನಿನ ಅಭಿವೃದ್ಧಿಗೆ ಸಧ್ಯಕ್ಕೆ ಇನ್ನೂ ಯಾವ ಕ್ರಮವನ್ನು ಕೈಗೊಂಡಿರುವುದಿಲ್ಲ.

ಶ್ರೀ ಆರ್. ಎಂ. ಪಾಟೀಲ್.—ಈ ಸವುಳು ಭೂಮಿಯ ಬಗ್ಗೆ ಸರ್ಕಾರ ಕೊಟ್ಟಿರತಕ್ಕ ಮಾಹಿತಿ ಕಡಿಮೆ ಇದೆ. ಆಲ್ಲಿ ಪ್ರತ್ಯಕ್ಷವಾಗಿ ನೋಡುವುದಾದರೆ ಈ ಸವುಳು ಭೂಮಿ ಇನ್ನೂ ಹೆಚ್ಚು ಇದೆ. ಅದೂ ಅಲ್ಲದೆ ಸವುಳು ಭೂಮಿಯ ಅಭಿವೃದ್ಧಿಗಾಗಿ ೧೯೮೩–೮೪ರಲ್ಲಿ ಒಂದು ಯೋಜನೆಯನ್ನು ಮಾಡಿ ಕಾಡಾನಲ್ಲಿ ಇದನ್ನು ಅಭಿವೃದ್ಧಿ ಮಾಡುತ್ತಿದೆ ಎಂದು ಹೇಳುತ್ತಿದ್ದಾರೆ. ಆ ಕಾಡದವರು ಆ ಜಮೀನಿನ ಒಂದು ಕಡೆ ತಗ್ಗನ್ನು ತೆಗೆದಿರುವುದನ್ನು ಬಿಟ್ಟರೆ, ಈ ಸವುಳು ಬರದಹಾಗೆ ಮಾಡಿಯೇ ಇಲ್ಲ. ಸರ್ಕಾರದ ಹಣ ಮಾತ್ರ ಸಂಪೂರ್ಣವಾಗಿ ಖರ್ಚಾಗುತ್ತಿದೆ. ಇದರಿಂದ ಯಾವ ರೈತರಿಗೂ ಪ್ರಯೋಜನವಾಗುತ್ತಿಲ್ಲ. ಮತ್ತು ಕೇಂದ್ರ ಸರ್ಕಾರಕ್ಕೆ ೧೫ ಸಾವಿರ ಹೆಕ್ಟೇರನ್ನು ಅಭಿವೃದ್ಧಿಪಡಿಸುವ ಸಲುವಾಗಿ ನೀರಾವರಿ ಯೋಜನೆ ಕೆಳಡೆ ಮಾಡುವಂತಹ ಯೋಜನೆಯನ್ನು ತಯಾರು ಮಾಡಿದ್ದಾರೆ. ಈ ಯೋಜನೆಯನ್ನು ಹೆಚ್ಚು ತೀವ್ರಗತಿಯಿಂದ ತೆಗೆದುಕೊಳ್ಳಬೇಕಾಗಿದೆ. ಗೋಕಾಕ್ ತಾಲ್ಲೂಕಿನಲ್ಲಿ ಈ ಯೋಜನೆಯನ್ನು, ತೆಗೆದುಕೊಂಡಿಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಇವತ್ತು ಆ ಭಾಗದಲ್ಲಿ ನೀರಾವರಿಯಾಗುವುದಕ್ಕಿಂತ ಪರಿಣಾಮಕಾರಿಯಾಗಿ ಯಾವ್ಯಾವ ಜಮೀನು ಸಾಗುವಳಿಗೆ ಯೋಗ್ಯವಾಗಿತ್ತೋ, ಆ ಫಲವತ್ತಾದ ಭೂಮಿಯಿಂದ ರೈತರು ಬೆಳೆಯನ್ನು ತೆಗೆಯುತ್ತಿದ್ದಾರೋ ಇವತ್ತು ನೀರಾವರಿ ಬಂದಮೇಲೆ ಆ ಎಲ್ಲಾ ಭೂಮಿ ಸವುಳು ಆಗಿದ್ದು ರೈತರು ಬಡವರಾಗಿದ್ದಾರೆ. ಆದುದರಿಂದ ಇದನ್ನು ತೀವ್ರವಾಗಿ ಗಮನಿಸಿ ಆ ಜನರ ಸಲುವಾಗಿ ಯೋಜನೆಯನ್ನು ಕೂಡಲೇ ಕೈಗೊಳ್ಳಬೇಕೆಂದು ನಾನು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಪಡಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಭೂಮಿಯ ಮೇಲೆ ನೀರು ಹರಿದಾಗೆಲ್ಲಾ ಭೂಮಿಯಲ್ಲಿಗಡೆ ಇದ್ದಂತಹ ಉಪ್ಪು ಮೇಲೆ ಬಂದು ಮೊದಲು ಸಾಗುವಳಿ ಮಾಡುತ್ತಿದ್ದ ಭೂಮಿ ಈಗ ಸಾಗುವಳಿಗೆ ನಾಲಾಯಕ್ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ವಷ್ ಜಿಲ್ಲಾಪರಿಷತ್ ಹಾಗೂ ಕಾಡಾದವರು ಸೇರಿಕೊಂಡು ಇದನ್ನು ಅಭಿವೃದ್ಧಿಪಡಿಸಬೇಕೆಂಬುದಾಗಿ ಸರ್ಕಾರದ ಆದೇಶ ಇದೆ. ಆದರೆ ೧೫ ಸಾವಿರ ಹೆಕ್ಟೇರ್‌ಗಳಲ್ಲಿ ಈ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೋಸ್ಕರ ೮೭೪.೫೦ ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರ ಕೊಡಬೇಕು, ಕೊಟ್ಟರೆ ತೀವ್ರ ರೀತಿಯಲ್ಲಿ ಆ ಭೂಮಿಯನ್ನು ಸರಿಪಡಿಸುತ್ತೇವೆಂದು ಹೇಳಿದ್ದೇವೆ. ಅವರಿಂದ ಹಣ ಬಂದ ಮೇಲೆ ಗೋಕಾಕ್ ತಾಲ್ಲೂಕಿನಲ್ಲೂ ಈ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.